	4. ರಮೇಶ ಬಿಂದುರಾವ್ ಝಳಕಿ		5. ಡಿ.ಎಸ್. ನಾಯಕ್ 6. ಎಸ್.ಜಿ. ಹೆಗಡೆ 7. ಆಜೀಜುಲ್ಲಾ ಬೇಗ್ 8. ಜಿ.ವಿ. ಕೊಂಗವಾಡ
ಐ.ಪಿ.ಎಸ್.	1. ಎಸ್.ಕೆ. ವೇಣುಗೋಪಾಲ್ 2. ಎನ್.ಆರ್. ನಡಮನಿ	1. ಯು. ನಿಸ್ಸಾರ್‌ಅಹ್ಮದ್ 2. ಎ.ಜಿ. ಅಯಾಚೀತ್	1. ಜಯಪ್ರಕಾಶ್ ವಿ. ನಾಯಕ್ 2. ಗೋಪಾಲ್ ಬಿ. ಹೊಸೂರ್
ಐ.ಎಫ್.ಎಸ್.	-	1. ಬಿ.ಜಿ. ಮುಗ್ದುರ್ 2. ಎ.ಸಿ. ಕೇಶವಮೂರ್ತಿ.	1. ಜಾವೇದ್ ಹುಸೇನ್ ಖಾನ್

ಶೀಘ್ರಲಿಪಿ ಮತ್ತು ಬೆರಳಚ್ಚುಗಾರರ ನೇಮಕಾತಿ

1943 - ಶ್ರೀ ಇಯನೂರು ಮಂಜುನಾಥ್ (ಹೊಸನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ವಿವಿಧ ಇಲಾಖೆಗಳಲ್ಲಿ ಶೀಘ್ರಲಿಪಿ ಮತ್ತು ಬೆರಳಚ್ಚುಗಾರರ ಹುದ್ದೆಗಳನ್ನು ಭರ್ತಿಮಾಡುವ ಸಲುವಾಗಿ ಯಾವ ವರ್ಷದಲ್ಲಿ ಜಾಹೀರಾತು ನೀಡಲಾಗಿತ್ತು ನೇಮಕಾತಿ ಮಾಡಿಕೊಳ್ಳಲಾಗಿದೆಯೇ ಎಲ್ಲಾ ವರ್ಗಗಳ ಅಭ್ಯರ್ಥಿಗಳಿಗೂ ಸೇರಿ (ಜಾಹೀರಾತಿನ ಪ್ರತಿಯನ್ನು ಒದಗಿಸುವುದು)

ಆ) ಈ ಜಾಹೀರಾತಿನಲ್ಲಿ ನಮೂದಿಸಲಾಗಿರುವ ಹುದ್ದೆಗಳಷ್ಟು ಶೀಘ್ರಲಿಪಿಗಾರರ ಮತ್ತು ಬೆರಳಚ್ಚುಗಾರರ ಹುದ್ದೆಗಳಿವೆ.

ಇ) ಕನ್ನಡ ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರು ಸಾವಿರಾರು ಸಂಖ್ಯೆಯಲ್ಲಿ ವಯೋಮಿತಿ ಮೀರಿ ನಿರುದ್ಯೋಗಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಈ) ಹಾಗಿದ್ದಲ್ಲಿ ಬೆರಳಚ್ಚುಗಾರರ ಮತ್ತು ಶೀಘ್ರಲಿಪಿಗಾರರ ಹುದ್ದೆಗಳ ಭರ್ತಿಗಾಗಿ ಸರ್ಕಾರದವರು ಕೂಡಲೇ ಜಾಹೀರಾತು ನೀಡಿ, ವಯೋಮಿತಿಯಲ್ಲಿ ಎಲ್ಲಾ ವರ್ಗಗಳಿಗೂ 10 ವರ್ಷಗಳ ಸಡಿಲಿಕೆಯೊಂದಿಗೆ ನೇಮಕ ಮಾಡುವ ಯೋಜನೆ ಸರ್ಕಾರಕ್ಕಿದೆಯೇ ಇದ್ದರೆ ಯಾವಾಗ ಕ್ರಮ ಕೈಗೊಳ್ಳಲಾಗುವುದು.

ಉ) ನೇಮಕ ಮಾಡಿಕೊಳ್ಳುವಾಗ ವಯೋಮಿತಿ ಮೀರುತ್ತಿರುವವರಿಗೆ ಮೊದಲು ಅವ್ಯತೆ ನೀಡುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ ಈ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಬೇಕೆಂದು ಯಾವುದಾದರೂ ಸಂಘ ಸಂಸ್ಥೆಗಳಿಂದ ಸರ್ಕಾರಕ್ಕೆ ಮನವಿಗಳು ಬಂದಿದೆಯೇ.

ಊ) ಈ ಹುದ್ದೆಗಳ ಖಾಲಿ ಸ್ಥಾನಗಳಿಷ್ಟು ಈಗಿರುವ ಬೆರಳಚ್ಚು ನಿರುದ್ಯೋಗಿಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿಗಳು) :

ಅ) (1) 19985

(2) 1989

(3) 1989 ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ವಿಶೇಷ ಬ್ಯಾಕ್‌ಲಾಗ್ ಆಯ್ಕೆ.

(4) 1994 ಪರಿಶಿಷ್ಟ ಜಾತಿ : ಪರಿಶಿಷ್ಟ ಪಂಗಡ ವಿಶೇಷ ಬ್ಯಾಕ್‌ಲಾಗ್ ಆಯ್ಕೆ.

1,2 ಮತ್ತು 3ರಲ್ಲಿ ಮಾಡಿದ ಆಯ್ಕೆಗಳಲ್ಲಿ ನೇಮಕಾತಿ ಮಾಡಿಕೊಳ್ಳಲಾಗಿದೆ. 4ರಲ್ಲಿ ಆಯ್ಕೆ ಪಟ್ಟಿಯನ್ನು ದಿ: 31-7-95ರಂದು ಪ್ರಕಟಿಸಲಾಗಿದೆ.

ಅ) (1) ಶೀಪ್ರಲಿಪಿಗಾರರು - 415
ಬೆರಳಚ್ಚುಗಾರರು - 1725

(2) ಶೀಪ್ರಲಿಪಿಗಾರರು - 6
ಬೆರಳಚ್ಚುಗಾರರು - 154

(3) ಶೀಪ್ರಲಿಪಿಗಾರರು - 77
ಬೆರಳಚ್ಚುಗಾರರು - 234

(4) ಶೀಪ್ರಲಿಪಿಗಾರರು - 74
ಬೆರಳಚ್ಚುಗಾರರು - 107

ಇ) ಹೌದು

ಈ) ಪ್ರಸ್ತುತದಲ್ಲಿರುವ ಗರಷ್ಠ ವಯೋಮಿತಿ ಈ ರೀತಿ ಇದೆ.

ಪರಿಶಿಷ್ಠ ಜಾತಿ:ಪರಿಶಿಷ್ಠ ಪಂಗಡ:ಪ್ರವರ್ಗ - 38 ವರ್ಷ

ಇತರ ಹಿಂದುಳಿದ ವರ್ಗಗಳಿಗೆ - 36 ವರ್ಷ

ಸಾಮಾನ್ಯ ಅರ್ಹತೆ - 33 ವರ್ಷ

ಇದನ್ನು ಇನ್ನೂ ಹೆಚ್ಚಿಸುವ ಪ್ರಸ್ತಾವನೆ ಇಲ್ಲ.

ಉ) ಈ ರೀತಿ ಮಾಡಲು ನಿಯಮಗಳಲ್ಲಿ ಅಸ್ಪದವಿಲ್ಲ.

ಊ) ಬೆರಳಚ್ಚುಗಾರರು - 1116

ಶೀಪ್ರಲಿಪಿಗಾರರು - 422

ಬೆರಳಚ್ಚು ನಿರುದ್ಯೋಗಿಗಳ ಬಗ್ಗೆ ಮಾಹಿತಿ ಸದ್ಯ ಲಭ್ಯವಿಲ್ಲ.

ರಾಜ್ಯದಲ್ಲಿ ಜನತಾ ದರ್ಶನ ಕಾರ್ಯಕ್ರಮ

1953 - ಆಯನೂರು ಮಂಜುನಾಥ (ಹೊಸನಗರ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) *ರಾಜ್ಯದಲ್ಲಿ ಈವರೆಗೆ ಜನತಾ ದರ್ಶನದ ಕಾರ್ಯಕ್ರಮ ನಡೆದ ಸ್ಥಳಗಳು ಯಾವುವು? (ದಿನಾಂಕ ಸಹಿತ ತಿಳಿಸುವುದು)*

ಆ) *ಜನತಾ ದರ್ಶನದಲ್ಲಿ ಸಾರ್ವಜನಿಕರಿಂದ ಬಂದ ಅಹವಾಲುಗಳು ಎಷ್ಟು ಯಾವ-ಯಾವ ಸ್ವರೂಪದ ಸಮಸ್ಯೆಗಳ ಅರ್ಜಿ ಬಂದಿವೆ ಈ ಅರ್ಜಿಗಳು ಯಾವ-ಯಾವ ಇಲಾಖೆಗೆ ಸಂಬಂಧಿಸಿದವುಗಳಾಗಿವೆ. (ಈ ಮಾಹಿತಿಯನ್ನು ಜಿಲ್ಲಾವಾರು ವಿವರವಾಗಿ ತಿಳಿಸುವುದು) (ಶಿವಮೊಗ್ಗ ಜಿಲ್ಲೆಯ ಮಾಹಿತಿಯನ್ನು ತಾಲ್ಲೂಕುವಾರು ನೀಡುವುದು)*

ಇ) *ಈ ರೀತಿ ಸಲ್ಲಿಸಲಾದ ಅರ್ಜಿಗಳಲ್ಲಿ ಇತ್ಯರ್ಥವಾದ ಅರ್ಜಿಗಳು ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು)*

ಈ) *ಜನತಾ ದರ್ಶನದ ಕಾರ್ಯಕ್ರಮಕ್ಕೆ ತಗುಲಿದ ವೆಚ್ಚ ಎಷ್ಟು (ಜಿಲ್ಲಾವಾರು ಮಾಹಿತಿ ತಿಳಿಸುವುದು)*

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಗಳು) :

ಅ)

ಸ್ಥಳ	ದಿನಾಂಕ
ಮೈಸೂರು	4-7-95
ಕೊಡಗು	5-7-95